







# ಸ್ವಾಮಿ ವಿವೇಕಾನಂದರಿಗೆ ವಿಶೇಷ ಪುಷ್ಪ ನಮನ

ಸ್ವಾಮಿ ವಿವೇಕಾನಂದರು ಭಾರತ ದೇಶದ ಸ್ಥಿತಿಗತಿಗಳ ನೇರ ಅನುಭವ ಪಡೆಯಲು ಪರಿವ್ರಾಜಕರಾಗಿ ಪರ್ಯಟನೆ ಮಾಡುತ್ತಾ ೧೮೯೨ರಲ್ಲಿ ಬೆಂಗಳೂರಿಗೂ ಬಂದಿದ್ದರು. ಅವರು ಇಲ್ಲಿದ್ದ ಸಂದರ್ಭದಲ್ಲಿ ಮೆಜೆಸ್ಟಿಕ್ ಪ್ರದೇಶದಲ್ಲಿ ಒಂದು ಮನೆಯ ಮುಂದೆ ಇದ್ದ ಜಗುಲಿಯ ಮೇಲೆ ಕುಳಿತಿದ್ದರು. ಸ್ವಾಮೀಜಿಯವರು ಕುಳಿತು ಪವಿತ್ರಗೊಳಿಸಿದ ಆ ಜಗುಲಿಯ ಮೇಲಿನ ಸುಮಾರು ಹನ್ನೆರಡು ಅಡಿ ಉದ್ದ ಮತ್ತು ಎರಡು ಅಡಿ ಅಗಲದ ಕಲ್ಲಿನ ಹಲಗೆಯನ್ನು ಬೆಂಗಳೂರಿನ ಬುಲ್ ಟೆಂಪಲ್ ರಸ್ತೆಯ ರಾಮಕೃಷ್ಣ ಮಠದಲ್ಲಿ ಸುಂದರವಾದ ಮಂಟಪದಲ್ಲಿ ಒಂದು ಜಗುಲಿಯ ಮೇಲೆ ಪ್ರತಿಷ್ಠಾಪಿಸಲಾಗಿದೆ. ಹಾಗೆಯೇ ೧೯೧೧ರ ಮಾರ್ಚ್ ತಿಂಗಳಲ್ಲಿ ಬೆಂಗಳೂರಿಗೆ ಬಂದಿದ್ದ ಶ್ರೀಮಾತೆ ಶಾರದಾ ದೇವಿಯವರು ಈ ಕೇಂದ್ರದಲ್ಲಿ ಕೆಲವು ದಿನಗಳ ಕಾಲ ತಂಗಿದ್ದರು. ಆಗ ಅವರು ಕುಳಿತು ಧ್ಯಾನ ಮಾಡಿ ಪವಿತ್ರಗೊಳಿಸಿದ ದೊಡ್ಡ ಬಂಡೆಯು ಈ ಮಂಟಪದ ಬಳಿಯೇ ಇದ್ದು, ಅದು ಶ್ರೀಶಾರದಾ ಮಾತಾ ಪವಿತ್ರ ಶಿಲೆ ಎಂದೇ ಪ್ರಸಿದ್ಧವಾಗಿದೆ. ಇನ್ನು, ಕಳೆದ ಕಳೆದ ಒಂದು ಶತಮಾನಕ್ಕಿಂತಲೂ ಹಿಂದಿನಿಂದ ಬೆಂಗಳೂರಿನಲ್ಲಿ ದಿವ್ಯತ್ರಯರ ಭಾವಧಾರೆಯು ಅತ್ಯಂತ ಕ್ರಿಯಾಶೀಲವಾಗಿದ್ದು ದೇಶ ವಿದೇಶಗಳಲ್ಲೂ ಈ ಸಂಗತಿ ಪ್ರಸಿದ್ಧವಾಗಿದೆ. ಈ ಎಲ್ಲ ಪ್ರಕ್ರಿಯೆಗಳಿಗೆ ಕಿರೀಟಪ್ರಾಯವಾಗಿ ಲಾಲ್‌ಬಾಗ್‌ನ ಗಾಜಿನ ಮನೆಯಲ್ಲಿ ಅತ್ಯಂತ ವಿಭಿನ್ನ ಮತ್ತು ವಿನೂತನ ರೀತಿಯ ಪುಷ್ಪ ನಮನವನ್ನು ಸ್ವಾಮೀಜಿಯವರಿಗೆ ಸಲ್ಲಿಸಿರುವುದು ಬೆಂಗಳೂರು ನಗರಕ್ಕೆ ಹೆಮ್ಮೆ ತರುವ ಸಂಗತಿಯಾಗಿದೆ. ನಮ್ಮ ದೇಶದಲ್ಲೇ ಈ ರೀತಿಯ ಪ್ರಣಾಮವನ್ನು ಸ್ವಾಮೀಜಿಯವರಿಗೆ ಸಲ್ಲಿಸಿರುವುದು ಪ್ರಥಮ ಅಥವಾ ಅತ್ಯಂತ ಅಪರೂಪ ಎನ್ನಬಹುದಾಗಿದೆ.

ಲಾಲ್‌ಬಾಗ್‌ನಲ್ಲಿ ಫಲಪುಷ್ಪ ಪ್ರದರ್ಶನಗಳನ್ನು ೧೯೧೨ರಿಂದ ಆಯೋಜಿಸಲಾಗುತ್ತಿದೆ. ೧೯೫೧ರಿಂದ ಕರ್ನಾಟಕ ರಾಜ್ಯ ತೋಟಗಾರಿಕೆ ಇಲಾಖೆಯು ಮೈಸೂರು ಉದ್ಯಾನ ಕಲಾ ಸಂಘದ ಸಹಯೋಗದೊಂದಿಗೆ ಪ್ರತಿವರ್ಷವೂ ಗಣರಾಜ್ಯೋತ್ಸವ ಮತ್ತು ಸ್ವಾತಂತ್ರ್ಯೋತ್ಸವಗಳ ಅಂಗವಾಗಿ ಫಲಪುಷ್ಪ ಪ್ರದರ್ಶನಗಳನ್ನು ಏರ್ಪಡಿಸುತ್ತದೆ. ಈ ಬಾರಿಯ ಗಣರಾಜ್ಯೋತ್ಸವದ ಪ್ರದರ್ಶನವು ೨೧೧ನೇ ಪ್ರದರ್ಶನವಾಗಿದೆ. ಸ್ವಾಮಿ ವಿವೇಕಾನಂದರ ೧೫೭ನೇ ಜನ್ಮದಿನಾಚರಣೆಯ ಅಂಗವಾಗಿ ಮತ್ತು ಶಿಕಾಗೋದಲ್ಲಿ ನಡೆದ ವಿಶ್ವಧರ್ಮ ಸಮ್ಮೇಳನದಲ್ಲಿ ಸ್ವಾಮೀಜಿಯವರ ನೀಡಿದ ಐತಿಹಾಸಿಕ ಮಹತ್ವದ ಭಾಷಣಕ್ಕೆ ೧೨೭ ವರ್ಷಗಳು ತುಂಬಿದ ಹಿನ್ನೆಲೆಯಲ್ಲಿ ಈ ಫಲಪುಷ್ಪ ಪ್ರದರ್ಶನವನ್ನು ರಾಮಕೃಷ್ಣ ಮಠದ ಸಹಯೋಗದೊಂದಿಗೆ ಸ್ವಾಮಿ ವಿವೇಕಾನಂದರಿಗೆ ಗೌರವಪೂರ್ವಕವಾಗಿ **ವಿವೇಕ ಪುಷ್ಪ ಪ್ರದರ್ಶನ** ಎಂಬ ಶೀರ್ಷಿಕೆಯೊಂದಿಗೆ ಸಮರ್ಪಿಸಲಾಯಿತು.

ಗಾಜಿನ ಮನೆಯ ಆವರಣದೊಳಗೆ ಕನ್ಯಾಕುಮಾರಿಯ ಸ್ವಾಮಿ ವಿವೇಕಾನಂದರ ಸ್ಮಾರಕ, ಬೇಲೂರು ಮಠದ ಸ್ವಾಮಿ ವಿವೇಕಾನಂದರ ದೇವಾಲಯದ ಒಳ ಆವರಣ, ಬೆಂಗಳೂರಿನ ರಾಮಕೃಷ್ಣ ಮಠದಲ್ಲಿರುವ ಸ್ವಾಮೀಜಿಯವರು ಕುಳಿತಿದ್ದ ಶಿಲೆಯನ್ನುಳ್ಳ ಮಂಟಪ, ಶಿಕಾಗೋದ ವಿವೇಕಾನಂದ ಸ್ಮಾರಕ ಇವುಗಳ ಪುಷ್ಪ ಮಾದರಿ, ವರ್ಣರಂಜಿತ ಹೂವುಗಳ ನಡುವೆ ಇಡಲ್ಪಟ್ಟ ಸ್ವಾಮೀಜಿಯವರ ಬೃಹತ್ ಗಾತ್ರದ ಪ್ರತಿಮೆ ಮತ್ತು ವಿವಿಧ ಗಾತ್ರ ಮತ್ತು ಎತ್ತರದ ಪ್ರತಿಮೆಗಳು ಹಾಗೂ ಉಬ್ಬು ಶಿಲ್ಪಗಳು, ನೂರು ಫಲಕಗಳಲ್ಲಿ ಸ್ವಾಮೀಜಿಯವರ ಚಿತ್ರ ಮಾಹಿತಿ ಪ್ರದರ್ಶನ ಮುಂತಾದ ಏರ್ಪಾಡು ಗಳು ನೋಡಲು ಬಂದವರ ಆಕರ್ಷಣೆಯ ಕೇಂದ್ರಗಳಾಗಿದ್ದವು.



ಹಾಲೆಂಡ್, ನ್ಯೂಜಿಲೆಂಡ್, ಅಮೆರಿಕಾ, ದಕ್ಷಿಣ ಆಫ್ರಿಕ, ಕೀನ್ಯ, ಥ್ಯಾಲ್ಯಾಂಡ್, ಬ್ರೆಜಿಲ್, ಆಸ್ಟ್ರೇಲಿಯಾ, ಡೆನ್‌ಮಾರ್ಕ್, ಅರ್ಜೆಂಟೈನಾ ಈ ದೇಶಗಳಿಗೆ ಸೇರಿದ ವಿವಿಧ ಬಣ್ಣ ವಿನ್ಯಾಸ ಗಾತ್ರ ಇತ್ಯಾದಿ ಮಾನದಂಡಗಳನ್ನು ಉಳ್ಳ ೨೩೫ ಆಕರ್ಷಕ ಬಗೆಯ ಒಟ್ಟು ೫, ೧೯, ೨೦೦ ಹೂಗಳ ಮೂಲಕ ಸ್ವಾಮೀಜಿಯವರಿಗೆ ಪುಷ್ಪ ನಮನವನ್ನು ಅರ್ಪಿಸಲಾಯಿತು.

ಗಾಜಿನ ಮನೆಯ ಮನೆಯ ಹೊರಗೂ ಸ್ವಾಮೀಜಿಯವರನ್ನು ಕುರಿತ ಚಿತ್ರ ಪ್ರದರ್ಶನ, ಗಾಜಿನ ಮನೆಯ ಮುಂಭಾಗದಲ್ಲಿ ನಿರ್ಮಿಸಲಾಗಿದ್ದ ವೇದಿಕೆಯಲ್ಲಿ ಪ್ರತಿದಿನ ಸಂಜೆ ವೈಚಾರಿಕ, ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು, ಪುಸ್ತಕ ಪ್ರದರ್ಶನ ಮತ್ತು ಮಾರಾಟ ಮಳಿಗೆ, ಸ್ವಾಮೀಜಿಯವರು ಉಲ್ಲೇಖಿಸಿರುವ ನೀತಿ ಕಥೆಗಳ ಪ್ರಾತ್ಯಕ್ಷಿಕೆ, ಲಾಲ್‌ಬಾಗ್‌ನ ಎಲ್ಲೆಡೆ ದೀಪದ ಕಂಬಗಳು ಮತ್ತು ಅಲಂಕಾರಿಕ ಕಂಬಗಳ ಮೇಲೆ ಸ್ವಾಮೀಜಿಯವರ ಸೂಕ್ತಿ ಮತ್ತು ಘೋಷವಾಕ್ಯಗಳ ಪ್ರದರ್ಶನ, ಮಕ್ಕಳಿಗಾಗಿ ಚಿತ್ರ ರಚನೆಯ ಸ್ಪರ್ಧೆ ಮುಂತಾದ ವೈವಿಧ್ಯಮಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಬೆಂಗಳೂರಿನ ಬುಲ್‌ಟೆಂಪಲ್ ರಸ್ತೆಯ ರಾಮಕೃಷ್ಣ ಮಠದ ಅಧ್ಯಕ್ಷರೂ, ರಾಮಕೃಷ್ಣ ಮಹಾ ಸಂಘದ ಹಿರಿಯ ಯತಿವರ್ಯರುಗಳಲ್ಲಿ ಒಬ್ಬರೂ ಆಗಿರುವ ಪರಮ ಪೂಜ್ಯ ಸ್ವಾಮೀಜಿ ಹರ್ಷಾನಂದಜೀ ಮಹಾರಾಜ್ ಅವರ ಆಶೀರ್ವಾದ ಮತ್ತು ಮಾರ್ಗದರ್ಶನದೊಂದಿಗೆ, ಶ್ರೀ ರಾಮಕೃಷ್ಣ ವಿದ್ಯಾರ್ಥಿ ಮಂದಿರಮ್ (ಎಸ್‌ಆರ್‌ವಿಎಮ್) ಮೇಲ್ವಿಚಾರಕರಾದ ಪೂಜ್ಯ ಸ್ವಾಮಿ ತದ್ಯುಕ್ತಾನಂದಜಿ ಮಹಾರಾಜ್ ಅವರ ನೇತೃತ್ವದಲ್ಲಿ ವಿವೇಕ ಪುಷ್ಪ ಪ್ರದರ್ಶನವು ಬಹಳ ಯಶಸ್ವಿಯಾಗಿ ಮತ್ತು ಜನಪ್ರಿಯವಾಗಿ ಪೂರ್ಣಗೊಳ್ಳುವಲ್ಲಿ ಎಸ್‌ಆರ್‌ವಿಎಂನ ವಿದ್ಯಾರ್ಥಿಗಳು ವಹಿಸಿರುವ ಪಾತ್ರ ಅತ್ಯಂತ ಪ್ರಮುಖವೂ ಗಮನಾರ್ಹವೂ ಆಗಿದೆ. ಅವುಗಳ ಪೈಕಿ ಕೆಲವು ಪ್ರಮುಖ ಸಂಗತಿಗಳು ಈ ಕೆಳಗಿನಂತಿವೆ:

೨೦೧೯ರ ಅಕ್ಟೋಬರ್‌ನಲ್ಲಿ ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕರಾದ ಡಾ. ಎಂ ಜಗದೀಶ್ ಮತ್ತು ಅವರ ಜೊತೆಯ ಅಧಿಕಾರಿಗಳಿಗೆ ಅಧ್ಯಯನಕ್ಕೆ ನೆರವಾಗುವಂತೆ ಸ್ವಾಮಿ ವಿವೇಕಾನಂದರ ಜೀವನ ಮತ್ತು ಚಿಂತನೆಗಳಿಗೆ ಸಂಬಂಧಿಸಿದ ಗ್ರಂಥಗಳನ್ನು ಒದಗಿಸುವುದು.

ವಿವೇಕ ಪುಷ್ಪ ಪ್ರದರ್ಶನದ ರೂಪುರೇಷೆಗಳ ಬಗ್ಗೆ ಹಿರಿಯ ಸ್ವಾಮಿಗಳು ಅವರೊಂದಿಗೆ ಸಮಾಲೋಚಿಸಿರುವುದು.

ಫಲಪುಷ್ಪ ಪ್ರದರ್ಶನದ ಉದ್ಘಾಟನೆಯನ್ನು ಸ್ವಾಮಿ ತದ್ಯುಕ್ತಾನಂದಜಿ ಅವರ ಸಾನ್ನಿಧ್ಯದಲ್ಲಿ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ಯಡಿಯೂರಪ್ಪ ಅವರು ೧೭.೦೧.೨೦೨೦ರಂದು ಉದ್ಘಾಟನೆ ಮಾಡಿದುದು.

ಗಾಜಿನ ಮನೆಯ ಮುಂದೆ ಬಲಭಾಗಕ್ಕೆ ಸುಂದರವಾದ ವೇದಿಕೆಯನ್ನು ನಿರ್ಮಿಸಿ ಜನವರಿ ೧೭ರಿಂದ ೨೬ರವರೆಗೆ ಸಂಜೆ ೪.೩೦ರಿಂದ ೬.೩೦ರವರೆಗೆ ಭಜನೆ, ಭರತನಾಟ್ಯ ತಜ್ಞರಿಂದ ಉಪನ್ಯಾಸ , ಶಾಸ್ತ್ರೀಯ ಸಂಗೀತ, ಮುಂತಾದ ಕಾರ್ಯಕ್ರಮಗಳು ಹಾಗೂ ಎಸ್‌ಆರ್‌ವಿಎಂ ವಿದ್ಯಾರ್ಥಿಗಳಿಂದ ಶೌರ್ಯ ಪ್ರದರ್ಶನಗಳನ್ನು ಆಯೋಜಿಸಿದ್ದು.

ಗಾಜಿನ ಮನೆಯ ಸಮೀಪದಲ್ಲೇ, ಹಿಂಭಾಗದಲ್ಲಿ ಪುಸ್ತಕ ಪ್ರದರ್ಶನ ಮತ್ತು ಮಾರಾಟ ಮಳಿಗೆಯನ್ನು ನಿರ್ಮಿಸಿ ಪ್ರದರ್ಶನಕ್ಕೆ ಬಂದವರ ಕೈಗೆಟಕುವ ದರದಲ್ಲಿ ದಿವ್ಯತ್ರಯರ ಜೀವನ ಮತ್ತು ಆದರ್ಶಗಳನ್ನುಳ್ಳ ಪುಸ್ತಕಗಳು ದೊರಕುವಂತೆ ಮಾಡಿದುದು.

ಸ್ವಾಮೀಜಿಯವರ ಸಂದೇಶವನ್ನುಳ್ಳ ಚಿತ್ರವನ್ನು ಉಚಿತವಾಗಿ ಬಂದವರಿಗೆಲ್ಲ ತಲುಪಿಸುವುದು ಮುಂತಾದ ಕಾರ್ಯಗಳನ್ನೆಲ್ಲ ಎಸ್‌ಆರ್‌ವಿಎಮ್‌ನ ವಿದ್ಯಾರ್ಥಿಗಳು ಸಮರ್ಪಕವಾಗಿ ನೆರವೇರಿಸಿ ತೋಟಗಾರಿಕೆ ಇಲಾಖೆ ಮತ್ತು ಸಾರ್ವಜನಿಕರ ಮೆಚ್ಚುಗೆಗೆ ಪಾತ್ರರಾದರು.

ಪ್ರದರ್ಶನಕ್ಕೆ ರಾಮಕೃಷ್ಣ ಮಠದ ಯತಿವರ್ಯರು, ಇತರ ಕೆಲವು ಆಶ್ರಮಗಳ ಸ್ವಾಮಿಗಳು, ಗಣ್ಯಾತಿಗಣ್ಯರೂ ಸೇರಿದಂತೆ ಒಟ್ಟು ೨.೩೦ ಲಕ್ಷ ಜನರು ವಿವೇಕ ಪುಷ್ಪ ಪ್ರದರ್ಶನವನ್ನು ನೋಡಿ ಕಣ್ತುಂಬಿಕೊಂಡಿದ್ದು ಗಮನಾರ್ಹ ಸಂಗತಿ.

(ವಿಶೇಷ ವರದಿ : ಸುರೇಶ್ ಮೂನ)







Managing Editor : Swami Muktidananda Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020